# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಉಪ ಆಯುಕ್ತರು(ಆಸ್ತಿಗಳು) ರವರ ಕಛೇರಿ
## ಮಾಹಿತಿ ಹಕ್ಕು ಕಾಯ್ದೆ 2005ರ ಸೆಕ್ಷನ್ 4(1)ಎ ಮತ್ತು 4(1)ಬಿ ರಂತೆ ಪ್ರಕಟಿಸಲಾಗಿದೆ

## I. ಉಪ ಆಯುಕ್ತರು(ಆಸ್ತಿಗಳು)ರವರ ಕಛೇರಿಯ ಕಾರ್ಯಗಳು ಮತ್ತು ಕರ್ತವ್ಯಗಳು:

ಅ) **ಕಛೇರಿಯ ಹೆಸರು:** ಸಹಾಯಕ ಆಯುಕ್ತರು(ಆಸ್ತಿಗಳು)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕೇಂದ್ರ ಕಛೇರಿ, ಎನ್.ಆರ್.ವೃತ್ತ,
ಬೆಂಗಳೂರು – 560 002.
ದೂರವಾಣಿ ಸಂಖ್ಯೆ: 080–2297 5544

ಆ) **ರಚನೆ:**



ಇ). **1. ಆಸ್ತಿ ಇಲಾಖೆಯಲ್ಲಿ ನಿರ್ವಹಿಸಲಾಗುವ ಮುಖ್ಯ ಕೆಲಸ ಕಾರ್ಯಗಳು :**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಆಸ್ತಿವಿಭಾಗವು ಒಂದು ಪ್ರಮುಖ ಇಲಾಖೆಯಾಗಿದ್ದು, ಪಾಲಿಕೆಯ ಎಲ್ಲಾ ಆಸ್ತಿಗಳ ನಿರ್ವಹಣೆ ಸಂಬಂಧವಾಗಿ ವಲಯ ಅಪರ / ಜಂಟಿ ಆಯುಕ್ತರುಗಳ ಉಸ್ತುವಾರಿಯಲ್ಲಿ ಸಂಬಂಧಪಟ್ಟ ಕಂದಾಯ ಇಲಾಖೆ, ಕಾಮಗಾರಿ ಇಲಾಖೆ, ತೋಟಗಾರಿಕೆ ಇಲಾಖೆಯವರೊಡನೆ ತಪಾಸಣೆ ನಡೆಸಿ, ಹೊಸದಾಗಿ ಸೇರ್ಪಡೆಯಾಗುವ ಹಾಗೂ ಬಿಟ್ಟು ಹೋಗಿರುವ ಆಸ್ತಿಗಳನ್ನು ಗುರುತಿಸಿ, ಭೂಮಾಪಕರಿಂದ ಸದರಿ ಆಸ್ತಿಗಳ ಬಗ್ಗೆ ಮೋಜಿಣಿಪಡಿಸಿ ನಕ್ಷೆಯನ್ನು ತಯಾರಿಸಿ, ಆಸ್ತಿವಹಿಯಲ್ಲಿ ದಾಖಲಿಸಿ ದೃಢೀಕರಿಸಿ ಈ ಆಸ್ತಿಯನ್ನು ಸಂರಕ್ಷಿಸುವ ಕ್ರಮ ಕೈಗೊಳ್ಳಲಾಗುವುದು.

1. ವಲಯ ಅಪರ / ಜಂಟಿ ಆಯುಕ್ತರುಗಳ ಉಸ್ತುವಾರಿಯಲ್ಲಿ ನಗರಪಾಲಿಕೆಯ ಸ್ವತ್ತುಗಳ ಅತಿಕ್ರಮಣ ಮತ್ತು ಅನಧಿಕೃತ ಒತ್ತುವರಿಯನ್ನು ತಡೆಯುವುದು. ಹಾಗೂ ಅಂತಹ ಆಸ್ತಿಗಳನ್ನು ಸಂರಕ್ಷಿಸುವ ಸಲುವಾಗಿ ತಂತಿ ಬೇಲಿಯನ್ನು ಅಳವಡಿಸಲು ಕ್ರಮವಹಿಸಲು ಸೂಚಿಸಲಾಗುವುದು.
2. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸ್ವತ್ತುಗಳನ್ನು ಸಾರ್ವಜನಿಕ ಸಂಘ ಸಂಸ್ಥೆಗಳಿಗೆ/ ವ್ಯಕ್ತಿಗಳಿಗೆ ಬಾಡಿಗೆ, ಗುತ್ತಿಗೆ ಅಥವಾ ಮಾರುಕಟ್ಟೆ ದರದಲ್ಲಿ ಕ್ರಯಕ್ಕೆ ನೀಡುವಲ್ಲಿ ವಲಯ ಅಪರ/ ಜಂಟಿ ಆಯುಕ್ತರರಿಂದ ಬರುವ ಪ್ರಸ್ತಾವನೆಗಳನ್ನು ಸ್ಥಾಯಿ ಸಮಿತಿ ಮತ್ತು ಪಾಲಿಕೆ ಸಭೆಯ ತೀರ್ಮಾನಕ್ಕೆ ಮಂಡಿಸುವುದು ಮತ್ತು ಸರ್ಕಾರದ ಅನುಮೋದನೆಗೆ ಕಳುಹಿಸುವುದು. ಅಲ್ಲದೇ ಗುತ್ತಿಗೆಗೆ ನೀಡಲಾದ ಸ್ವತ್ತುಗಳ ಬಗ್ಗೆ ಮಾಹಿತಿಗಳನ್ನು ಗಣಕೀಕೃತಗೊಳಿಸಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ **ಮಾಹಿತಿಗಳನ್ನು**

**ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಬಗ್ಗೆ ಕ್ರಮ ವಹಿಸುವುದು.** ಪಾಲಿಕೆಯ ಆಸ್ತಿಗಳನ್ನು ಗುತ್ತಿಗೆ / ಕ್ರಯ ನೀಡುವ ಬಗ್ಗೆ ನಿಯಮಾವಳಿಗಳ ಪ್ರಕಾರ, ಸರ್ಕಾರದ ಅನುಮೋದನೆ ಪಡೆಯುವ ಕುರಿತು ಕ್ರಮವಹಿಸುವುದು.

- ಪಾಲಿಕೆಯ ಆಸ್ತಿಗಳನ್ನು ವರ್ಗೀಕರಿಸಿ ಗಣಕೀಕೃತಗೊಳಿಸುವ ಕಾರ್ಯ ನಿರ್ವಹಣೆ.
- ಗಣಕಯಂತ್ರದ ಮೂಲಕ ಸ್ಕ್ಯಾನ್ ಮಾಡಿ ಭೌಗೋಳಿಕ ಮಾಹಿತಿ ಯೋಜನೆಗೆ ಸಂಪರ್ಕ ಕಲ್ಪಿಸುವುದು.

**2. ನಿರ್ವಹಿಸಲಾಗುವ ವಹಿಗಳು :**

1. ಪಾಲಿಕೆಗೆ ಸೇರಿದ ಆಸ್ತಿಗಳನ್ನು ಆಸ್ತಿ ವಹಿಯಲ್ಲಿ ದಾಖಲಿಸಿ ನಿರ್ವಹಿಸುವುದು.
2. ಪಾಲಿಕೆಗೆ ಸೇರಿದ ಸ್ವತ್ತುಗಳಲ್ಲಿ ಸಂಘ ಸಂಸ್ಥೆಗಳಿಗೆ ಗುತ್ತಿಗೆ/ ಮಾರಾಟ ಮಾಡಲಾಗುವ ಸ್ವತ್ತುಗಳನ್ನು ಗುತ್ತಿಗೆ ಆಸ್ತಿ ವಹಿಯಲ್ಲಿ ಕ್ರಮಬದ್ಧವಾಗಿ ದಾಖಲಿಸುವುದು.
3. ಪಾಲಿಕೆ ಆಸ್ತಿ ಒತ್ತುವರಿ ಬಗ್ಗೆ ವಹಿಗಳನ್ನು ನಿರ್ವಹಿಸಬೇಕಾಗಿದೆ.

3. **ಆಸ್ತಿಗಳ ನಿರ್ವಹಣೆ :**

ಪ್ರಸ್ತುತ ಸಾಲಿನಲ್ಲಿ ಪಾಲಿಕೆಯ ವ್ಯಾಪ್ತಿಯು ವಿಸ್ತಾರಗೊಂಡಿದ್ದು, ಸರ್ಕಾರದ ಅಧಿಸೂಚನೆ ಸಂಖ್ಯೆ: UDD/92/MNY/2006, Dt:16-1-2007 ರಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿರುವ ಹಿನ್ನಲೆಯಲ್ಲಿ ಹೊಸದಾಗಿ ದಾಸರಹಳ್ಳಿ, ಬೊಮ್ಮನಹಳ್ಳಿ, ರಾಜರಾಜೇಶ್ವರಿನಗರ, ಯಲಹಂಕ, ಮಹದೇವಪುರ ಎಂದು ಐದು ವಲಯಗಳಾಗಿ ವಿಂಗಡವಾಗಿ ವಿಲೀನಗೊಂಡಿರುತ್ತದೆ. ಈ ವಲಯಗಳಲ್ಲಿ ಪಾಲಿಕೆಯ ಆಸ್ತಿಗಳನ್ನು ಗುರುತಿಸುವ ಕಾರ್ಯವು ಪ್ರಗತಿಯಲ್ಲಿದ್ದು, ಇದುವರೆಗೂ ಸುಮಾರು 600 ಪಾಲಿಕೆ ಆಸ್ತಿಗಳನ್ನು ಗುರುತಿಸಲು ಸಾದ್ಯವಾಗಿದ್ದು, ಈ ಆಸ್ತಿಯ ವಿವರಗಳನ್ನು ಪಾಲಿಕೆಯ ಆಸ್ತಿ ವಹಿಯಲ್ಲಿ ದಾಖಲಿಸುವ ಕೆಲಸಗಳು ಪ್ರಗತಿಯಲ್ಲಿರುತ್ತವೆ. ಹಾಗೂ ಇದರ ಜೊತೆ 21 ಕೆರೆಗಳ ಅಳತೆ ಮತ್ತು ಸರ್ಕಾರದಿಂದ ಘನತ್ಯಾಜ್ಯ ವಿಲೇವಾರಿಗೆ ಮಂಜೂರಾದ 370 ಜಾಗಗಳ ಅಳತೆ ಕಾರ್ಯ ಕೈಗೊಳ್ಳಲಾಗಿರುತ್ತದೆ.

5. **ಪ್ರಸ್ತಾಪಿಸಿದ ಕಾರ್ಯಕ್ರಮಗಳು :**

1. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 5 ಹೊಸ ವಲಯಗಳು ಸೇರ್ಪಡೆಯಾಗಿರುವುದರಿಂದ ಅಲ್ಲಿನ ಸರ್ಕಾರಿ ಮತ್ತು ಪಾಲಿಕೆ ಆಸ್ತಿಗಳನ್ನು ತಕ್ಷಣ ಅಳತೆ ಮಾಡಿಸಿ ಆಸ್ತಿವಹಿಗೆ ದಾಖಲಿಸಿಕೊಳ್ಳಬೇಕಾಗಿದೆ. ವಿಳಂಬವಾದರೆ ಅನಧಿಕೃತ ಕಟ್ಟಡಗಳ ನಿರ್ಮಾಣಕ್ಕೆ ಅವಕಾಶವಾಗುತ್ತದೆ.
2. ಆಸ್ತಿ ವಹಿಯನ್ನು ಕಾಲೋಚಿತಗೊಳಿಸಿ ಗಣಕ ಯಂತ್ರಕ್ಕೆ ಅಳವಡಿಸುವುದು.
3. ಪಾಲಿಕೆ ಆಸ್ತಿಗಳ ನಕ್ಷೆ ಮತ್ತು ದಾಖಲೆಗಳನ್ನು ಸ್ಕ್ಯಾನ್ ಮಾಡಿಸಿ ಭೌಗೋಳಿಕ ಮಾಹಿತಿಯ ಯೋಜನೆಗೆ ಸಂಪರ್ಕ ಕಲ್ಪಿಸುವುದು.

## II. ಅಧಿಕಾರಿ ಮತ್ತು ಸಿಬ್ಬಂದಿಗಳ ಅಧಿಕಾರಗಳು ಮತ್ತು ಕರ್ತವ್ಯಗಳು:

1. **ಅಪರ ಆಯುಕ್ತರು (ಆಸ್ತಿಗಳು) :**

ಆಸ್ತಿ ಶಾಖೆಯ ಕಡತಗಳನ್ನು ಪರಿಶೀಲಿಸಿ ಮಾರ್ಗಸೂಚಿಯ ಆದೇಶ ನೀಡುವುದು.

2. **ಜಂಟಿ ಆಯುಕ್ತರು (ಆಸ್ತಿಗಳು):**

ಆಸ್ತಿ ಶಾಖೆಯ ಕಡತಗಳನ್ನು ಪರಿಶೀಲಿಸಿ ಮಾರ್ಗಸೂಚಿಯ ಆದೇಶ ನೀಡುವುದು.

3. **ಸಹಾಯಕ ಆಯುಕ್ತರು (ಆಸ್ತಿಗಳು):**

ಆಸ್ತಿವಿಭಾಗಕ್ಕೆ ಸಂಬಂಧಪಟ್ಟಂತೆ ಹಾಗೂ ಭೂಸ್ವಾಧೀನ ಶಾಖೆಯ ಬಡವಾಡೆ ಅಧಿಕಾರಿ ಹಾಗೂ ಮೇಲುಸ್ತುವಾರಿ ಮಾಹಿತಿ ಹಕ್ಕು ಕಾಯ್ದೆಯಡಿ ಸಕ್ಷಮ ಅಧಿಕಾರಿ ಕಾರ್ಯ ನಿರ್ವಹಣೆ.

**4. ತಹಸೀಲ್ದಾರ್(ಆಸ್ತಿಗಳು) :**

ಆಸ್ತಿ ಶಾಖೆಗೆ ಸಂಬಂಧಿಸಿದ ಕಡತಗಳ ಪರಿಶೀಲನಾ ಅಧಿಕಾರಿ.

**5. ವ್ಯವಸ್ಥಾಪಕರು:**

ಆಸ್ತಿ ವಿಭಾಗದ ಮೇಲುಸ್ತುವಾರಿ ಹಾಗೂ ಕಡತಗಳನ್ನು ಪರಿಶೀಲಿಸಿ ಮೇಲಿನ ಅಧಿಕಾರಿಗಳಿಗೆ ಮಂಡಿಸುವುದು. ಮಾಹಿತಿ ಹಕ್ಕು ಕಾಯ್ದೆಯಡಿ ಪ್ರಕರಣಗಳ ಪರಿಶೀಲನೆ ಕಾರ್ಯ ನಿರ್ವಹಣೆ.

**6. ಶ್ರೀ ಆರ್.ವೆಂಕಟೇಶ್ ಪ್ರ.ದ.ಸ:**

ಆಸ್ತಿ ಶಾಖೆಯ ಸಿಬ್ಬಂದಿಯವರ ವಿಷಯ ನಿರ್ವಾಹಕರು, ಲೆಕ್ಕಪತ್ರ, ಆಡಿಟ್ ಹಾಗೂ ಜಂಟಿ ಸದನ ಸಮಿತಿಗೆ ಸಂಬಂಧಿಸಿದ ಕಡತಗಳ ವಿಲೇವಾರಿ.

**7. ಶ್ರೀ ಸಿ.ಬಾಲಕೃಷ್ಣ ಪ್ರ.ದ.ಸ:**

ಮಾಹಿತಿ ಹಕ್ಕು ಕಾಯ್ದೆ–2005ಕ್ಕೆ ಸಂಬಂಧಿಸಿದ ಅರ್ಜಿಗಳ ವಿಷಯ ನಿರ್ವಾಹಕರು ಹಾಗೂ ದಕ್ಷಿಣ ವಲಯಕ್ಕೆ ಸಂಬಂಧಿಸಿದ ಕಡತಗಳ ವಿಲೇವಾರಿ.

**8. ಶ್ರೀ. ಹೆಚ್.ಎಸ್.ಬಾಲಕೃಷ್ಣ, ದ್ವಿ.ದ.ಸ:**

ಮಾಹಿತಿ ಹಕ್ಕು ಕಾಯ್ದೆ–2005ಕ್ಕೆ ಸಂಬಂಧಿಸಿದ ಅರ್ಜಿಗಳ ವಿಷಯ ನಿರ್ವಾಹಕರು ಹಾಗೂ ಪಶ್ಚಿಮ ವಲಯಕ್ಕೆ ಸಂಬಂಧಿಸಿದ ಕಡತಗಳ ವಿಲೇವಾರಿ.

**9. ಶ್ರೀ. ಸಿ.ವೈ. ರಾಮಚಂದ್ರಯ್ಯ ದ್ವಿ.ದ.ಸ.:**

ಮಾಹಿತಿ ಹಕ್ಕು ಕಾಯ್ದೆ–2005ಕ್ಕೆ ಸಂಬಂಧಿಸಿದ ಅರ್ಜಿಗಳ ವಿಷಯ ನಿರ್ವಾಹಕರು ಹಾಗೂ ಪೂರ್ವ ವಲಯಕ್ಕೆ ಸಂಬಂಧಿಸಿದ ಕಡತಗಳ ವಿಲೇವಾರಿ.

**10. ಶ್ರೀಮತಿ ಎಂ. ದೇವಿ, ದ್ವಿ.ದ.ಸ:**

ಆಸ್ತಿ ಶಾಖೆಗೆ ಬರುವ ಪತ್ರ/ಕಡತಗಳ ವಿಲೇವಾರಿ ಸ್ವೀಕೃತಿಯ ವಿಷಯ ನಿರ್ವಾಹಕರು. ಕಛೇರಿ ಪತ್ರ / ಕತಡಗಳ ಬೆರಳಚ್ಚು ಮಾಡುವ ಕೆಲಸ.

**11. ಶ್ರೀ. ಶ್ರೀ ಗುರುರಾಜ್ ಎ ಪೂಜಾರಿ, ಶೀಘ್ರಲಿಪಿಗಾರರು:**

ಶೀಘ್ರಲಿಪಿಗಾರಿಕೆ / ಬೆರಳಚ್ಚು ಕಾರ್ಯ.

12. **ಶ್ರೀ ಎಸ್.ಪರಮೇಶ್, ಪ್ರ.ದ.ಭೂಮಾಪಕರು:**

ಪೂರ್ವ ವಲಯ/ ಯಲಹಂಕ/ ಬೊಮ್ಮನಹಳ್ಳಿ/ಮಹದೇವಪುರ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳು ಸರ್ವೆ ಮಾಡುವುದು ಹಾಗೂ ಕಾನೂನು ಶಾಖೆಯಿಂದ ಬರುವ ಕಡತ ವಿಲೇವಾರಿ ಮಾಡುವುದು ಮೇಲಾಧಿಕಾರಿ ರವರು ಸೂಚಿಸುವಂತಹ ಕೆಲಸ.

13. **ಶ್ರೀ ವಿ.ವಿ.ಶಿವರುದ್ರಯ್ಯ, ದ್ವಿ.ದ.ಭೂಮಾಪಕರು:**

ಪಶ್ಚಿಮ/ದಕ್ಷಿಣ/ದಾಸರಹಳ್ಳಿ/ರಾಜ ರಾಜೇಶ್ವರಿ ನಗರ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳ ಸರ್ವೆ ಕಾರ್ಯ ಹಾಗೂ ಕಾನೂನು ಶಾಖೆಯಿಂದ ಸದರಿ ವಲಯಕ್ಕೆ ಸಂಬಂಧಿಸಿದ ಕಡತ ವಿಲೇವಾರಿ ಮೇಲಾಧಿಕಾರಿರವರು ಸೂಚಿಸುವಂತಹ ಕೆಲಸ.

**III. ಮೇಲ್ವಿಚಾರಣೆ ಮತ್ತು ಜವಾಬ್ದಾರಿಗಳನ್ನು ಒಳಗೊಂಡಂತೆ ತೀರ್ಮಾನ ಕೈಗೊಳ್ಳುವಲ್ಲಿ ಅನುಸರಿಸುವ ಕ್ರಮಗಳು:**

ಕಛೇರಿಯ ಸಿಬ್ಬಂದಿಯವರು ಸಾರ್ವಜನಿಕರಿಂದ ಬರುವಂತಹ ಅರ್ಜಿಗಳನ್ನು ಸ್ವೀಕರಿಸಿ ಅರ್ಜಿಗಳನ್ನು ಕೆ.ಎಂ.ಸಿ ಕಾಯ್ದೆ ಸೆಕ್ಷನ್ 176 ರ ಅಡಿಯಲ್ಲಿ ಪರಿಶೀಲಿಸಿ ನಿಗದಿತ ಸಮಯದೊಳಗೆ ಅರ್ಜಿಗಳನ್ನು ಮೇಲಾಧಿಕಾರಿಗಳ ಅವಗಾಹನೆಗೆ ಹಾಗೂ ಮುಂದಿನ ಆದೇಶಕ್ಕೆ ಮಂಡಿಸುವುದು ಹಾಗೂ ಮೇಲಾಧಿಕಾರಿಗಳ ಆದೇಶದಂತೆ ಮುಂದಿನ ಕ್ರಮ ವಹಿಸುವುದು.

**IV. ಆಸ್ತಿಗಳು ಇಲಾಖೆಯ ಕಾರ್ಯನಿರ್ವಹಣೆಗೆ ಅದು ರೂಪಿಸಿರುವ ಸೂತ್ರಗಳು:**

ಕೆ.ಎಂ.ಸಿ ಕಾಯ್ದೆ ಸೆಕ್ಷನ್ 176 ರ ಅಡಿಯಲ್ಲಿ ಕೌನ್ಸಿಲ್ ಸಭೆ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ, ಮತ್ತು ಸರ್ಕಾರ ಹಾಗೂ ಆಯುಕ್ತರು ಕಾಲಕಾಲಕ್ಕೆ ನೀಡುವ ಸೂಚನೆಗಳನ್ನು ಪಾಲಿಸಿ ಕ್ರಮ ವಹಿಸಲಾಗುತ್ತಿದೆ.

**V. ಅದರ ಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ಅದು ಹೊಂದಿರುವ ಅಥವಾ ಅದರ ನಿಯಂತ್ರಣದಲ್ಲಿರುವ ಅಥವಾ ಅದರ ಉದ್ಯೋಗಿಗಳು ಬಳಸುವ ನಿಯಮಗಳು, ಅಧಿನಿಯಮಗಳು, ಅನುಸೂಚಿಗಳು, ಕೈಪಿಡಿಗಳು ಮತ್ತು ದಾಖಲೆಗಳು:**

ಕೆ.ಎಂ.ಸಿ ಕಾಯ್ದೆ ಸೆಕ್ಷನ್ 176 ರ ಅಡಿಯಲ್ಲಿ ನಿಯಾಮವಳಿಗಳು ಹಾಗೂ ಸರ್ಕಾರ ಮತ್ತು ಪಾಲಿಕೆಯ ಸಭೆಯು ತೆಗೆದುಕೊಳ್ಳುವ ನಿರ್ಣಯಗಳಂತೆ ಕ್ರಮ ವಹಿಸಲಾಗುವುದು.

**VI. ಇಲಾಖೆ ಹೊಂದಿರುವ ದಸ್ತಾವೇಜುಗಳ ಪ್ರವರ್ಗಗಳ ವಿವರಣಾ ಪಟ್ಟಿ:**

**ಮೊದಲನೇ ಕ್ಯಾಟಗರಿ:**

ಅ. ಸ್ಟಾಕ್ ಪುಸ್ತಕ
ಆ. ಹಾಜರಾತಿ ಪಸ್ತಕ
ಇ. ವೇತನ ಬಟವಾಡೆ ಪುಸ್ತಕ
ಈ. ದೂರವಾಣಿ ಪುಸ್ತಕ
ಉ. ವಿಷಯವಹಿಗಳು (ವಿಷಯ ನಿರ್ವಾಹಕರಿಗೆ ಪ್ರತ್ಯೇಕವಾಗಿ)
ಎ. ಆಸ್ತಿವಹಿ ಪುಸ್ತಕ

**ಎರಡನೇ ಕ್ಯಾಟಗರಿ:**

ಅನ್ವಯಿಸುವುದಿಲ್ಲ

**VII. ಅದರ ಕಾರ್ಯನೀತಿಯ ರಚನೆ ಅಥವಾ ಅದರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರೊಡನೆ ಸಮಾಲೋಚಿಸಲು ಅಥವಾ ಅವರ ಪ್ರಾತಿನಿಧ್ಯವಿರುವಂತೆ ಮಾಡಲು ಇರುವಂಥ ಯಾವುದೇ ವ್ಯವಸ್ಥೆಯ ವಿವರಗಳನ್ನು:**

ಆಸ್ತಿಶಾಖೆ ಇಲಾಖೆಯಲ್ಲಿ ಸಿಬ್ಬಂದಿಗಳು ಪಾಲಿಕೆಯ ವ್ಯಾಪ್ತಿಗೆ ಸಂಬಂಧಿಸಿದಂತೆ ಪಾಲಿಕೆಯ ಆಸ್ತಿಗಳನ್ನು ಗುತ್ತಿಗೆ/ಕ್ರಯಕ್ಕೆ ನೀಡುವ ಸಂಬಂಧ ಕೋರಿರುವ ಅರ್ಜಿಗಳನ್ನು ಸ್ವೀಕರಿಸಿ ಕೆ.ಎಂ.ಸಿ ಕಾಯ್ದೆ ಸೆಕ್ಷನ್ 176 ರ ಅಡಿಯಲ್ಲಿ ಪರಿಶೀಲಿಸಿ, ಸರ್ಕಾರ ಮತ್ತು ಮಾನ್ಯ ಆಯುಕ್ತರು, ಮೇಲಾಧಿಕಾರಿಗಳ ಆದೇಶಕ್ಕೆ ಪ್ರಕರಣಗಳನ್ನು ವಿಲೇವಾರಿ ಮಾಡಲು ಕ್ರಮ ಜರುಗಿಸಲಾಗುತ್ತದೆ. ಸೂಕ್ತ ಆದೇಶಗಳ ನಂತರ ಅದನ್ನು ಜಾರಿಗೊಳಿಸಲು ಕ್ರಮವಹಿಸಲಾಗಿತ್ತದೆ.

**VIII. ಮಂಡಳಿಗಳು, ಪರಿಷತ್ತುಗಳು, ಸಮಿತಿಗಳು ಅಥವಾ ಇತರ ನಿಕಾಯಗಳು ಮತ್ತು ಅದರ ಭಾಗವಾಗಿ ಅಥವಾ ಅದರ ಸಲಹೆಯ ಉದ್ದೇಶಕ್ಕಾಗಿ ರಚಿತವಾದ ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳನ್ನೊಳಗೊಂಡ ಮಂಡಳಿಗಳ, ಪರಿಷತ್ತುಗಳ, ಸಮಿತಿಗಳ ಮತ್ತು ಇತರ ನಿಕಾಯಗಳ ಸಭೆಗಳು ಸಾರ್ವಜನಿಕರಿಗೆ ಮುಕ್ತವಾಗಿರುತ್ತವೆಯೇ ಅಥವಾ ಅಂತಹ ಸಭೆಗಳ ನಡಾವಳಿಗಳು ಸಾರ್ವಜನಿಕರಿಗೆ ದೊರೆಯುತ್ತವೆಯೇ ಎಂಬುದರ ವಿವರಪಟ್ಟಿಕೆಯನ್ನು:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಸಭೆ, ಈ ಸಭೆ ಮತ್ತು ಸಮಿತಿಗಳು ಆಸ್ತಿ ಶಾಖೆಗೆ ಸಂಬಂಧಿಸಿದಂತೆ, ತೆಗೆದುಕೊಳ್ಳುವ ನಿರ್ಣಯಗಳು ಸಾರ್ವಜನಿಕರಿಗೆ ಅವಶ್ಯವಾಗಿ ದೊರೆಯುತ್ತವೆ.

**IX. ಉಪ ಆಯುಕ್ತರು(ಆಸ್ತಿಗಳು) ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರ ನಿರ್ದೇಶಿಕೆ:–**

| ಕ್ರ. ಸಂ | ಹೆಸರು ಮತ್ತು ಹುದ್ದೆ | ಕಛೇರಿ ವಿಳಾಸ | ದೂರವಾಣಿ ಸಂಖ್ಯೆ |
|---|---|---|---|
| 1 | ಶ್ರೀ.<br>ಅಪರ ಆಯುಕ್ತರು (ಆಸ್ತಿಗಳು) | ಅಪರ ಆಯುಕ್ತರು (ಆಸ್ತಿಗಳು) ಕಛೇರಿ,<br>ಪಾಲಿಕೆ ಕೇಂದ್ರ ಕಛೇರಿ,<br>ಎನ್.ಆರ್.ವೃತ್ತ, ಬೆಂಗಳೂರು. | 080–22975552 |
| 2 | ಶ್ರೀ.ಮುಜೀಬುಲ್ಲಾ ಜಫ಼ಾರಿ<br>ಜಂಟಿ ಆಯುಕ್ತರು(ಆಸ್ತಿಗಳು) | ಜಂಟಿ ಆಯುಕ್ತರು(ಆಸ್ತಿಗಳು) ಕಛೇರಿ,<br>ಪಾಲಿಕೆ ಕೇಂದ್ರ ಕಛೇರಿ, ಎನ್.ಆರ್.ವೃತ್ತ,<br>ಬೆಂಗಳೂರು. | 080–22975543 |
| 3 | ಶ್ರೀ ಎಂ.ದೇವರಾಜಪ್ಪ<br>ಸಹಾಯಕ ಆಯುಕ್ತರು (ಆಸ್ತಿಗಳು) | ಸಹಾಯಕ ಆಯುಕ್ತರು (ಆಸ್ತಿಗಳು) ಕಛೇರಿ,<br>ಪಾಲಿಕೆ ಕೇಂದ್ರ ಕಛೇರಿ, ಎನ್.ಆರ್.ವೃತ್ತ,<br>ಬೆಂಗಳೂರು. | 080–22975544 |
| 4 | ಶ್ರೀ. ವಿ.ಹನುಮಂತರಾಯಪ್ಪ<br>ತಹಸೀಲ್ದಾರ್(ಆಸ್ತಿಗಳು) ಓ.ಓ.ಡಿ ಮೇಲೆ<br>ನೇಮಕಾತಿ ವಿಭಾಗ | ಸಹಾಯಕ ಆಯುಕ್ತರು (ಆಸ್ತಿಗಳು) ಕಛೇರಿ,<br>ಆಸ್ತಿವಿಭಾಗ, ಪಾಲಿಕೆ ಕೇಂದ್ರ ಕಛೇರಿ,<br>ಎನ್.ಆರ್.ವೃತ್ತ, ಬೆಂಗಳೂರು. | 080–22112585<br>080–22975544 |
| 5 | ಶ್ರೀ. ಪ್ರದೀಪ್ ರಾಥೋಡ್<br>ವ್ಯವಸ್ಥಾಪಕರು ಓ.ಓ.ಡಿ. ಮೇಲೆ ಉಪ<br>ಆಯುಕ್ತರು(ಆಡಳಿತ) ರವರ ಕಛೇರಿ | ಉಪ ಆಯುಕ್ತರು (ಆಡಳಿತ) ಕಛೇರಿ,<br>ಪಾಲಿಕೆ ಕೇಂದ್ರ ಕಛೇರಿ, ಎನ್.ಆರ್.ವೃತ್ತ,<br>ಬೆಂಗಳೂರು. | 080–22975561 |
| 6 | (ಹಾಲಿ ಖಾಲಿ ಇರುತ್ತದೆ)<br>ವ್ಯವಸ್ಥಾಪಕರು | ಸಹಾಯಕ ಆಯುಕ್ತರು (ಆಸ್ತಿಗಳು) ಕಛೇರಿ,<br>ಆಸ್ತಿವಿಭಾಗ, ಪಾಲಿಕೆ ಕೇಂದ್ರ ಕಛೇರಿ,<br>ಎನ್.ಆರ್.ವೃತ್ತ, ಬೆಂಗಳೂರು. | 080–22975544 |
| 7 | ಶ್ರೀ ಆರ್.ವೆಂಕಟೇಶ್<br>ಪ್ರಥಮ ದರ್ಜೆ ಸಹಾಯಕರು | ಸಹಾಯಕ ಆಯುಕ್ತರು (ಆಸ್ತಿಗಳು) ಕಛೇರಿ,<br>ಆಸ್ತಿವಿಭಾಗ, ಪಾಲಿಕೆ ಕೇಂದ್ರ ಕಛೇರಿ,<br>ಎನ್.ಆರ್.ವೃತ್ತ, ಬೆಂಗಳೂರು. | 080–22975544 |
| 8 | ಶ್ರೀ. ಸಿ.ಬಾಲಕೃಷ್ಣ<br>ಪ್ರಥಮ ದರ್ಜೆ ಸಹಾಯಕರು | ಸಹಾಯಕ ಆಯುಕ್ತರು (ಆಸ್ತಿಗಳು) ಕಛೇರಿ,<br>ಆಸ್ತಿವಿಭಾಗ, ಪಾಲಿಕೆ ಕೇಂದ್ರ ಕಛೇರಿ,<br>ಎನ್.ಆರ್.ವೃತ್ತ, ಬೆಂಗಳೂರು. | 080–22975544 |
| 09 | ಶ್ರೀ. ಸಿ.ವೈ.ರಾಮಚಂದ್ರಯ್ಯ<br>ದ್ವಿತೀಯ ದರ್ಜೆ ಸಹಾಯಕರು<br>ಸಹಾಯಕ ಆಯುಕ್ತರು (ಆಸ್ತಿಗಳು) | ಸಹಾಯಕ ಆಯುಕ್ತರು (ಆಸ್ತಿಗಳು) ಕಛೇರಿ,<br>ಆಸ್ತಿವಿಭಾಗ, ಪಾಲಿಕೆ ಕೇಂದ್ರ ಕಛೇರಿ,<br>ಎನ್.ಆರ್.ವೃತ್ತ, ಬೆಂಗಳೂರು. | 080–22975544 |
| 10 | ಶ್ರೀ. ಹೆಚ್.ಎಸ್.ಬಾಲಕೃಷ್ಣ<br>ದ್ವಿತೀಯ ದರ್ಜೆ ಸಹಾಯಕರು | ಸಹಾಯಕ ಆಯುಕ್ತರು (ಆಸ್ತಿಗಳು) ಕಛೇರಿ,<br>ಆಸ್ತಿವಿಭಾಗ, ಪಾಲಿಕೆ ಕೇಂದ್ರ ಕಛೇರಿ,<br>ಎನ್.ಆರ್.ವೃತ್ತ, ಬೆಂಗಳೂರು. | 080–22975544 |
| 11 | ಶ್ರೀಮತಿ. ಎಂ.ದೇವಿ<br>ದ್ವಿತೀಯ ದರ್ಜೆ ಸಹಾಯಕರು | ಸಹಾಯಕ ಆಯುಕ್ತರು (ಆಸ್ತಿಗಳು) ಕಛೇರಿ,<br>ಆಸ್ತಿವಿಭಾಗ, ಪಾಲಿಕೆ ಕೇಂದ್ರ ಕಛೇರಿ,<br>ಎನ್.ಆರ್.ವೃತ್ತ, ಬೆಂಗಳೂರು. | 080–22975544 |

| | | | |
|---|---|---|---|
| 12 | ಬೆರಳಚ್ಚುಗಾರ್ತಿ (ಖಾಲಿ) | ಸಹಾಯಕ ಆಯುಕ್ತರು (ಆಸ್ತಿಗಳು) ಕಛೇರಿ, ಆಸ್ತಿವಿಭಾಗ, ಪಾಲಿಕೆ ಕೇಂದ್ರ ಕಛೇರಿ, ಎನ್.ಆರ್.ವೃತ್ತ, ಬೆಂಗಳೂರು. | 080–22975544 |
| 13 | ಶ್ರೀ ಗುರುರಾಜ್ ಎ ಪೂಜಾರಿ<br>ಶೀಘ್ರಲಿಪಿಗಾರರು | ಸಹಾಯಕ ಆಯುಕ್ತರು (ಆಸ್ತಿಗಳು) ಕಛೇರಿ, ಆಸ್ತಿವಿಭಾಗ, ಪಾಲಿಕೆ ಕೇಂದ್ರ ಕಛೇರಿ, ಎನ್.ಆರ್.ವೃತ್ತ, ಬೆಂಗಳೂರು. | 080–22975544 |
| 14 | ಶ್ರೀ. ಎಸ್.ಪರಮೇಶ್<br>ಪ್ರಥಮ ದರ್ಜೆ ಭೂಮಾಪಕರು | ಸಹಾಯಕ ಆಯುಕ್ತರು (ಆಸ್ತಿಗಳು) ಕಛೇರಿ, ಆಸ್ತಿವಿಭಾಗ, ಪಾಲಿಕೆ ಕೇಂದ್ರ ಕಛೇರಿ, ಎನ್.ಆರ್.ವೃತ್ತ, ಬೆಂಗಳೂರು. | 080–22975544 |
| 15 | ಶ್ರೀ. ವಿ.ವಿ.ಶಿವರುದ್ರಯ್ಯ<br>ದ್ವಿತೀಯ ದರ್ಜೆ ಭೂಮಾಪಕರು | ಸಹಾಯಕ ಆಯುಕ್ತರು (ಆಸ್ತಿಗಳು) ಕಛೇರಿ, ಆಸ್ತಿವಿಭಾಗ, ಪಾಲಿಕೆ ಕೇಂದ್ರ ಕಛೇರಿ, ಎನ್.ಆರ್.ವೃತ್ತ, ಬೆಂಗಳೂರು. | 080–22975544 |
| 16 | ಚಾಲಕರು (ಖಾಲಿ) | ಉಪ ಆಯುಕ್ತರು (ಕಂದಾಯ) ಕಛೇರಿ, ಪಾಲಿಕೆ ಕೇಂದ್ರ ಕಛೇರಿ, ಎನ್.ಆರ್.ವೃತ್ತ, ಬೆಂಗಳೂರು. | 080–22975544 |
| 17 | ಶ್ರೀ. ಸತೀಶ್‌ಕುಮಾರ್<br>ನಾಲ್ಕನೇ ದರ್ಜೆ ನೌಕರರು | ಸಹಾಯಕ ಆಯುಕ್ತರು (ಆಸ್ತಿಗಳು) ಕಛೇರಿ, ಆಸ್ತಿವಿಭಾಗ, ಪಾಲಿಕೆ ಕೇಂದ್ರ ಕಛೇರಿ, ಎನ್.ಆರ್.ವೃತ್ತ, ಬೆಂಗಳೂರು. | 080–22975544 |
| 18 | ಶ್ರೀ. ಎಸ್.ಸತೀಶ್‌ಕುಮಾರ್<br>ನಾಲ್ಕನೇ ದರ್ಜೆ ನೌಕರರು<br>ಸ.ಆ.(ಆಸ್ತಿಗಳು)ರವರ ಕಛೇರಿಯಿಂದ ಓ.ಓ.ಡಿ. ಮೇಲೆ ವಿ.ಆ(ಹಣಕಾಸು ಮತ್ತು ಯೋಜನೆ)ಕಛೇರಿಗೆ. | ಸಹಾಯಕ ಆಯುಕ್ತರು (ಆಸ್ತಿಗಳು) ಕಛೇರಿ, ಆಸ್ತಿವಿಭಾಗ, ಪಾಲಿಕೆ ಕೇಂದ್ರ ಕಛೇರಿ, ಎನ್.ಆರ್.ವೃತ್ತ, ಬೆಂಗಳೂರು. | 080–22975544 |
| 19 | ಶ್ರೀ. ಎಸ್.ವೆಂಕಟೇಶ್<br>ನಾಲ್ಕನೇ ದರ್ಜೆ ನೌಕರರು<br>ಸ.ಆ.(ಆಸ್ತಿಗಳು)ರವರ ಕಛೇರಿಯಿಂದ ಓ.ಓ.ಡಿ. ಮೇಲೆ ಜೆ.ಎನ್.ಎನ್.ಯು.ಆರ್.ಎಂ.ಕಛೇರಿಗೆ. | ಸಹಾಯಕ ಆಯುಕ್ತರು (ಆಸ್ತಿಗಳು) ಕಛೇರಿ, ಆಸ್ತಿವಿಭಾಗ, ಪಾಲಿಕೆ ಕೇಂದ್ರ ಕಛೇರಿ, ಎನ್.ಆರ್.ವೃತ್ತ, ಬೆಂಗಳೂರು. | 080–22975544 |
| 20 | ಶ್ರೀ. ಎ.ನಾಗರಾಜು<br>ನಾಲ್ಕನೇ ದರ್ಜೆ ನೌಕರರು | ಸಹಾಯಕ ಆಯುಕ್ತರು (ಆಸ್ತಿಗಳು) ಕಛೇರಿ, ಆಸ್ತಿವಿಭಾಗ, ಪಾಲಿಕೆ ಕೇಂದ್ರ ಕಛೇರಿ, ಎನ್.ಆರ್.ವೃತ್ತ, ಬೆಂಗಳೂರು. | 080–22975544 |

**X. ನಿಯಮಾನುಸಾರ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರುಗಳು ಪಡೆಯುತ್ತಿರುವ ಮಾಸಿಕ ವೇತನದ ವಿವರಗಳು:**

| | | | |
|---|---|---|---|
| 1 | ಶ್ರೀ.<br>ಅಪರ ಆಯುಕ್ತರು (ಆಸ್ತಿಗಳು) | | |
| 2 | ಶ್ರೀ.ಮುಜೀಬುಲ್ಲಾ ಜಫ್ಹಾರಿ<br>ಜಂಟಿ ಆಯುಕ್ತರು(ಆಸ್ತಿಗಳು) | 24450–31800 | 24450 |

| | | | |
|---|---|---|---|
| 3 | ಶ್ರೀ. ಎಂ ದೇವರಾಜಪ್ಪ<br>ಸಹಾಯಕ ಆಯುಕ್ತರು (ಆಸ್ತಿಗಳು) | 15200–25650 | 16400 |
| 4 | ಶ್ರೀ. ವಿ.ಹನುಮಂತರಾಯಪ್ಪ<br>ತಹಸೀಲ್ದಾರ್(ಆಸ್ತಿಗಳು) | 11400–20600 | – |
| 5 | ಶ್ರೀ. ಪ್ರದೀಪ್ ರಾಥೋಡ್<br>ವ್ಯವಸ್ಥಾಪಕರು, ಉಪ ಆಯುಕ್ತರು(ಆಡಳಿತ) ಕಛೇರಿ ಓ.ಓ.ಡಿ. | 10000–18150 | 11400 |
| 6 | ಶ್ರೀ ಆರ್.ವೆಂಕಟೇಶ್<br>ಪ್ರಥಮ ದರ್ಜೆ ಸಹಾಯಕರು | 7275–13350 | 7450 |
| 7 | ಶ್ರೀ. ಸಿ.ಬಾಲಕೃಷ್ಣ<br>ಪ್ರಥಮ ದರ್ಜೆ ಸಹಾಯಕರು | 7275–13350 | 7275 |
| 8 | ಶ್ರೀ. ಸಿ.ವೈ.ರಾಮಚಂದ್ರಯ್ಯ<br>ದ್ವಿತೀಯ ದರ್ಜೆ ಸಹಾಯಕರು<br>ಸಹಾಯಕ ಆಯುಕ್ತರು(ಆಸ್ತಿಗಳು) | 5800–10500 | 8200 |
| 9 | ಶ್ರೀ. ಹೆಚ್.ಎಸ್.ಬಾಲಕೃಷ್ಣ<br>ದ್ವಿತೀಯ ದರ್ಜೆ ಸಹಾಯಕರು | 5800–10500 | 6000 |
| 10 | ಶ್ರೀಮತಿ. ಎಂ.ದೇವಿ<br>ದ್ವಿತೀಯ ದರ್ಜೆ ಸಹಾಯಕರು | 6250–12000 | 8200 |
| 11 | ಶ್ರೀ ಗುರುರಾಜ್ ಎ ಪೂಜಾರಿ<br>ಶೀಘ್ರಲಿಪಿಗಾರರು | 7275–13350 | 7450 |
| 12 | ಶ್ರೀ. ಎಸ್.ಪರಮೇಶ್<br>ಪ್ರಥಮ ದರ್ಜೆ ಭೂಮಾಪಕರು | 7275–13350 | 8825 |
| 13 | ಶ್ರೀ. ವಿ.ವಿ.ಶಿವರುದ್ರಯ್ಯ<br>ದ್ವಿತೀಯ ದರ್ಜೆ ಭೂಮಾಪಕರು | 6250–12000 | 8400 |
| 14 | ಚಾಲಕರು,<br>ಉಪ ಆಯುಕ್ತರು(ಕಂದಾಯ) ವಿಭಾಗಕ್ಕೆ ಓ.ಓ.ಡಿ (ಖಾಲಿ) | 5800–10500 | – |
| 15 | ಶ್ರೀ. ಸತೀಶ್‌ಕುಮಾರ್<br>ನಾಲ್ಕನೇ ದರ್ಜೆ ನೌಕರರು | 4800–7275 | 5100 |
| 16 | ಶ್ರೀ. ಎಸ್.ಸತೀಶ್‌ಕುಮಾರ್<br>ನಾಲ್ಕನೇ ದರ್ಜೆ ನೌಕರರು<br>ವಿ.ಆ(ಹಣಕಾಸು ಮತ್ತು ಯೋಜನೆ)ಕಛೇರಿಗೆ ಓ.ಓ.ಡಿ | 4800–7275 | 5500 |
| 17 | ಶ್ರೀ. ಎಸ್.ವೆಂಕಟೇಶ್<br>ನಾಲ್ಕನೇ ದರ್ಜೆ ನೌಕರರು<br>ಜೆ.ಎನ್.ಎನ್.ಯು.ಆರ್.ಎಂ.ಕಛೇರಿಗೆ ಓ.ಓ.ಡಿ | 4800–7275 | 5600 |
| 18 | ಶ್ರೀ. ಸತೀಶ್‌ಕುಮಾರ್<br>ನಾಲ್ಕನೇ ದರ್ಜೆ ನೌಕರರು | 4800–7275 | 4800 |

*XI.* **2009–10ನೇ ಯಾವ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆಯಡಿಯಲ್ಲಿ ನಿಗದಿಪಡಿಸಲಾದ ಅನುದಾನ ವಿವರಗಳು:**

ಈ ಶಾಖೆಗೆ ಯಾವುದೇ ಅನುದಾನ ನಿಗದಿಯಾಗಿರುವುದಿಲ್ಲ.

*XII.* **ಹಂಚಿಕೆ ಮಾಡಲಾದ ಮೊಬಲಗನ್ನೊಳಗೊಂಡು, ಸಹಾಯಧನ ಕಾರ್ಯಕ್ರಮಗಳ ಜಾರಿಯ ವಿದಾನವನ್ನು ಮತ್ತು ಅಂತಹ ಕಾರ್ಯಕ್ರಮಗಳ ಫಲಾನುಭವಿಗಳ ವಿವರಗಳನ್ನು:–**

ಈ ಶಾಖೆಗೆ ಅನ್ವಯಿಸುವುದಿಲ್ಲ.

*XIII.* **ಅದು ನೀಡಿರುವ ರಿಯಾಯಿತಿಗಳನ್ನು ಅನುಮತಿ ಪತ್ರಗಳನ್ನು ಅಥವಾ ಅಧಿಕಾರ ಪತ್ರಗಳನ್ನು ಪಡೆಯುವವರ ವಿವರಗಳನ್ನು:–**

ಈ ಶಾಖೆಗೆ ಅನ್ವಯಿಸುವುದಿಲ್ಲ.

*XIV.* **ಅದರ ಬಳಿ ಲಭ್ಯವಿರುವ ಅಥವಾ ಅದು ಹೊಂದಿರುವ ವಿದ್ಯುನ್ಮಾನ ರೂಪಕ್ಕೆ ಪರಿವರ್ತಿಸಿರುವ, ಮಾಹಿತಿಗೆ ಸಂಬಂಧಿಸಿದ ವಿವರಗಳನ್ನು:–**

ಈ ಶಾಖೆಗೆ ಅನ್ವಯಿಸುವುದಿಲ್ಲ.

*XV.* **ಸಾರ್ವಜನಿಕ ಉಪಯೋಗಕ್ಕಾಗಿ ಗ್ರಂಥಾಲಯವನ್ನು ಅಥವಾ ವಾಚನಾಲಯವನ್ನು ನಿರ್ವಹಿಸುತ್ತಿದ್ದಲ್ಲಿ ಅದರ ಕೆಲಸದ ಸಮಯವನ್ನೊಳಗೊಂಡಂತೆ ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಲಭ್ಯವಿರುವ ಸೌಲಭ್ಯಗಳ ವಿವರಗಳನ್ನು:–**

ಈ ಶಾಖೆಗೆ ಅನ್ವಯಿಸುವುದಿಲ್ಲ.

*XVI.* **ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರುಗಳು, ಪದನಾಮಗಳು ಮತ್ತು ಇತರೆ ವಿವರಗಳನ್ನು:–**

1. ಶ್ರೀ. ಎಂ.ದೇವರಾಜಪ್ಪ, ಕೆ.ಎಂ.ಎ.ಎಸ್
   ಸಹಾಯಕ ಆಯುಕ್ತರು(ಆಸ್ತಿಗಳು)
   2ನೇ ಮಹಡಿ,
   ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
   ಎನ್.ಆರ್.ವೃತ್ತ, ಬೆಂಗಳೂರು–560 002.
   ದೂ:22975544

2. ಶ್ರೀ. ಮುಜೀಬುಲ್ಲಾ ಜಫ್ಹಾರಿ, ಕೆ.ಎ.ಎಸ್
   ಜಂಟಿ ಆಯುಕ್ತರು (ಆಸ್ತಿಗಳು)
   2ನೇ ಮಹಡಿ,
   ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
   ಎನ್.ಆರ್.ವೃತ್ತ, ಬೆಂಗಳೂರು–560 002.
   ದೂ: 22975543

**XVII. ನಿಯಮಿಸಬಹುದಾದಂತಹ ಇತರ ಮಾಹಿತಿಯನ್ನು ಪ್ರಕಟಿಸತಕ್ಕದ್ದು ಮತ್ತು ಆ ತರುವಾಯ ಪ್ರತಿವರ್ಷ ಈ ಪ್ರಕಟಣೆಗಳನ್ನು ಅಂದಿನವರೆಗೆ ಪರಿಷ್ಕರಿಸತಕ್ಕದ್ದು:–**

ಆಸ್ತಿ ಇಲಾಖೆಗೆ ಸಂಬಂಧಿಸಿದಂತೆ, ಸಾಮಾನ್ಯ ಮಾಹಿತಿಗಳನ್ನು ಪಾಲಿಕೆಯ ವೆಬ್‌ಸೆಟ್‌ನಲ್ಲಿ ಅಳವಡಿಸಲಾಗಿದೆ. ಪಾಲಿಕೆ ವೆಬ್‌ಸೆಟ್ ವಿಳಾಸ: www.bbmp.gov.in

ಜಂಟಿ ಆಯುಕ್ತರು(ಆಸ್ತಿಗಳು)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

As per the Right to information Act 2005 chapter II rule 4(1)(b) all the information relating to the welfare Section has been computerized i.e., in an electronic form and also the information is available on the website www.bbmp.gov.in